

ಎಚ್.ಎಸ್. ಗೋಪಾಲ ರಾವ್

# ಷ. ಶೆಟ್ಟರ್ ಮತ್ತು ಮೊದಲ ಸಹಸ್ರಮಾನದ ಕನ್ನಡ ಶಾಸನಗಳು

2021ರ ಫೆಬ್ರುವರಿ 28ರಂದು ಕನ್ನಡ ವಿದ್ವತ್ ಲೋಕದಿಂದ ನಿರ್ಗಮಿಸಿದ ಪ್ರೊ. ಷ. ಶೆಟ್ಟರ್ ಅವರು ಕಳೆದ ಶತಮಾನದಲ್ಲಿ ಕನ್ನಡ ಶಾಸನ ಮತ್ತು ಕರ್ನಾಟಕ ಇತಿಹಾಸಕ್ಕೆ ಹೊಸ ಚೈತನ್ಯ ತಂದುಕೊಟ್ಟ ಕೆಲವೇ ಇತಿಹಾಸಕಾರರಲ್ಲಿ ಒಬ್ಬರು. ಈ ಶತಮಾನದ ಆರಂಭವು ಕನ್ನಡ ವಿದ್ವತ್ ಪ್ರಪಂಚಕ್ಕೆ ಮರೆಯಲಾಗದ ದುರ್ದಿನಗಳನ್ನು ಎದುರಾಗಿಸಿತು. 2021ರಲ್ಲೇ ಷ. ಶೆಟ್ಟರ್ ಮತ್ತು ಡಾ. ಎಂ. ಚಿದಾನಂದ ಮೂರ್ತಿ ಎಂಬ ವಿಶಿಷ್ಟ ಸಂಶೋಧಕರನ್ನು ಕಳೆದುಕೊಂಡ ಕನ್ನಡ ವಿದ್ವತ್ ಲೋಕಕ್ಕೆ ನಿಜದ ಅರ್ಥದಲ್ಲಿಯೂ ಭರಿಸಲಾಗದ ನಷ್ಟವಾಯಿತು. ಕನ್ನಡ ಶಾಸನ ಮತ್ತು ಸಾಂಸ್ಕೃತಿಕ ಇತಿಹಾಸದ ಸಂಶೋಧನಾ ಪ್ರಪಂಚಕ್ಕೆ ಡಾ. ಎಂ. ಚಿದಾನಂದ ಮೂರ್ತಿ ಅವರ ಕೊಡುಗೆ ಹೇಗೆ ಅತ್ಯಂತ ಮಹತ್ವದ್ದೋ ಹಾಗೆಯೇ ಇತಿಹಾಸ, ವಿಶೇಷವಾಗಿ ಕರ್ನಾಟಕ ಇತಿಹಾಸ ಮತ್ತು ಕಲಾ ಮತ್ತು ಶಾಸನ ಇತಿಹಾಸಕ್ಕೆ ಷ. ಶೆಟ್ಟರ್ ಅವರ ಕೊಡುಗೆಯೂ ಹಾಗೆಯೇ ಮಹತ್ವದ್ದು.

ಶೆಟ್ಟರ್, ಗಂಭೀರ ಸಂಶೋಧಕರನ್ನು ಅತ್ಯಂತ ಪ್ರೀತಿ ಮತ್ತು ವಿಶ್ವಾಸಗಳಿಂದ ಕಾಣುತ್ತಿದ್ದರು. ಉಡಾಫೆ ಸಂಶೋಧಕರೆಂದರೆ ಸಿಟ್ಟಿಗೇಳುತ್ತಿದ್ದ ಅವರು, ಯಾರಿಂದಲೇ ಆದರೂ ತಳಸ್ಪರ್ಶಿ ಸಂಶೋಧನೆಯನ್ನು ನಿರೀಕ್ಷಿಸುತ್ತಿದ್ದರು. ಸಂತೆ ಹೊತ್ತಿಗೆ ಮೂರು ಮೊಳ ನೇಯುವ ಕೆಲಸ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಸಂಶೋಧನೆಗೆ ಬೇಕಾದ ಪೂರ್ವಸಿದ್ಧತೆಯನ್ನು ಮಾಡಿಕೊಂಡೇ ಸಂಶೋಧನ ವಿದ್ಯಾರ್ಥಿ ಮುಂದುವರಿಯಬೇಕೆಂಬುದು ಅವರ ನಿರೀಕ್ಷೆಯಾಗಿತ್ತು.

ಬಳ್ಳಾರಿಯ ಅವರು ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದು, ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ (1960ರಿಂದ 1996ರವರೆಗೆ) ಸೇವೆಯನ್ನು ಸಲ್ಲಿಸುತ್ತಿದ್ದಾಗಲೇ (1967) ಪಿಎಚ್.ಡಿ. ಪದವಿಯನ್ನೂ ಪಡೆದು, ಮುಂದೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ (1970) ಮತ್ತೊಂದು ಪಿಎಚ್.ಡಿ. ಪದವಿ ಪಡೆದು ಬಂದು ಪುನಃ ಧಾರವಾಡದಲ್ಲೇ ತಮ್ಮ ವೃತ್ತಿಜೀವನವನ್ನು ಮುಂದುವರಿಸಿದರು.

ಅವರ ಕೃತಿಗಳ ಶೀರ್ಷಿಕೆಯೇ ಆಕರ್ಷಕ ಮತ್ತು ಕುತೂಹಲಕಾರಿ. 'ಇನ್ವೈಟಿಂಗ್ ಡೆತ್' ಎನ್ನುವ ಅವರ ಒಂದು ಕೃತಿ 'ಸಾವನ್ನು ಸ್ವಾಗತಿಸಿ' ಎಂದೂ 'ಪರ್ಸ್ಯೂಯಿಂಗ್ ಡೆತ್' ಎನ್ನುವ ಮತ್ತೊಂದು ಕೃತಿ 'ಸಾವನ್ನು ಅರಸಿ' ಎಂದೂ ಕನ್ನಡಿಗರಿಗೆ ಮತ್ತು ಇಂಗ್ಲಿಷ್ ಓದುಗರಿಬ್ಬರಿಗೂ ಪರಿಚಿತ. ಅವರು ಎರಡು ಸಂಪುಟಗಳಲ್ಲಿ ಪ್ರಕಟಿಸಿರುವ 'ಹೊಯ್ಸಳ ಟೆಂಪಲ್ಸ್' ಸಮಗ್ರವಾಗಿ ಚಿತ್ರಸಹಿತ ಹೊಯ್ಸಳ ದೇವಾಲಯಗಳನ್ನು ಕುರಿತು ವಿವರಿಸುತ್ತವೆ. ಅವರ ಯಾವುದೇ ಕೃತಿಗಳು ಸುಂದರವಾಗಿಯೇ ಓದುಗರಿಗೆ ತಲುಪಿರುವುದನ್ನು ಹೆಮ್ಮೆಯಿಂದ ನೆನಪು ಮಾಡಿಕೊಳ್ಳಬೇಕು.

ವಿಜಯನಗರ ಕಾಲದ ಕಂಚಿಯ ಒಂದು ತಾಮ್ರಶಾಸನವು ಅಲೆಕ್ಸಾಂಡರ್ ಮ್ಯಾಕ್ಲಿಯಾಡ್